**O. S. 44/2015** **DW - 1**

**ಪ್ರಮಾಣೀಕರಿಸಲಾದ ದಿನಾಂಕಃ** 05.02.2026.

**ಪಾಟೀ ಸವಾಲು ವಾದಿ ಪರ ಶ್ರೀ. ಸಿ. ಹೆಚ್. ಇ ವಕೀಲರಿಂದಃ**

ನಾನು ಬಿ. ಕಾಂ. ಓದಿದ್ದೇನೆ. ದಾವಾಸ್ತಿ ನಾನು ಖರೀದಿಸುವ ಪೂರ್ವದಲ್ಲಿ ವಾದಿ ಮತ್ತು ಅವರ ಕುಟುಂಬ ಸ್ವಾಧೀನದಲ್ಲಿದ್ದರು ಎಂದರೆ ಸರಿ. ದಾವಾಸ್ತಿಯ ದಕ್ಷಿಣಕ್ಕೆ ತ್ಯಾಗರಾಜ್ ರಸ್ತೆ ಎಂದರೆ ಸರಿ. ವಾದಿಯ ಮನೆಯ ಪಶ್ಚಿಮಕ್ಕೆ ಗೋಡೆಯ ನಂತರ ತಿರುಗಾಡುವ ದಾರಿ ಇದೆ ಎಂದರೆ ಅದು Passage ಆಗಿ ಎರಡು ಮನೆಗಳ ನಡುವೆ ಇರುವಂತದ್ದು, ಮುಂದುವರೆದ Passage ನಮ್ಮ ಜಾಗದಲ್ಲಿರುತ್ತದೆ. ನಾನು ಖರೀದಿಸುವಾಗ ದಕ್ಷಿಣಕ್ಕೆ ಗೇಟ್ ಇತ್ತು. ನಾನು ಖರೀದಿಸುವಾಗ ಈ ಗೇಟ್ ಪೂರ್ವದ ಗೋಡೆಗೆ ಲಗತ್ತಾಗಿತ್ತು ಎಂದರೆ ಸರಿಯಲ್ಲ, ನಮ್ಮ ಮನೆಯ ಗೋಡೆ ಇತ್ತು. ಆ ಗೋಡೆಗೆ ಗೇಟ್ ಇತ್ತು. ವಾದಿಗಳು ಅವರ ಜಾಗದಲ್ಲಿ ಬಾಡಿಗೆಗೆ ಮನೆ ಕಟ್ಟಿದ್ದಾರೆ ಎಂದರೆ ಗೊತ್ತಿಲ್ಲ. ರಸ್ತೆಯಿಂದ Passage ಮೂಲಕ ಹೋದರೆ ವಾದಿಯ ಜಾಗದಲ್ಲಿ ಒಂದು ಕಬ್ಬಿಣದ ಗೇಟ್ ಇದೆ, ನಾನು ಹಾಕಿರುತ್ತೇನೆ.

ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಒಂದೆರಡು ದಾಖಲೆಗಳು ನಿಶಾನೆಗೊಳಿಸಿರುವುದಿಲ್ಲ ಆದ್ದರಿಂದ ಮುಖ್ಯ ವಿಚಾರಣೆ ಆಗಬೇಕಿದ್ದು, ಸಮಯ ಕೋರಿರುತ್ತಾರೆ, ಆದ್ದರಿಂದ ಪಾಟೀ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚಿಸಿದೆ)

Sd/-

ಸಿವಿಲ್ ನ್ಯಾಯಾಧೀಶರು

ಮತ್ತು ಪ್ರದನ್ಯಾದಂ., ಪೊನ್ನಂಪೇಟೆ